**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು-560001**

ಸಂ:ಯೋ11/ವಿ.ಅ.ಯೋ/ಕೊ ನಿ.&.ಪೀ/02/2010-11 ದಿ:02/08/2010.

**ಸುತ್ತೋಲೆ**

**ವಿಷಯ:** ವಿಶೇಷ ಅಭಿವೃದ್ಧಿ ಯೋಜನೆಯ ಕಾಮಗಾರಿಗಳ ನಾಮಫಲಕ ಅಳವಡಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ:ಇಡಿ 183 ಯೋಯೋಕ 2010 ದಿನಾಂಕ:27/07/2010

2009-10 ಮತ್ತು 2010-11ನೇ ಸಾಲಿನಲ್ಲಿ ಡಾ.ನಂಜುಂಡಪ್ಪ ವರದಿಯನ್ವಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಂಜೂರಾದ ವಿವಿಧ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿರುವುದು ಸರಿಯಷ್ಟೆ. ಉಲ್ಲೇಖದ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಎಸ್.ಡಿ.ಪಿ ಕಾರ್ಯಕ್ರಮದಡಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ನಾಮಫಲಕ ಅಳವಡಿಸಲು ಸರ್ಕಾರದ ಆದೇಶವಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ನಾಮಫಲಕ ಅಳವಡಿಸಲು ತಿಳಿಸಿದೆ.

- ಯೋಜನೆಯ ಹೆಸರು:
- ಕಾರ್ಯಕ್ರಮದ ಹೆಸರು:
- ಅಂದಾಜು ಮೊತ್ತ
- ಕಾಮಗಾರಿ ಆರಂಭಿಸಲಾದ ದಿನಾಂಕ:
- ಕಾಮಗಾರಿ ಪೂರ್ಣಗೊಳಿಸುವ ವರ್ಷ:
- ಕಾಮಗಾರಿ ನಿರ್ವಹಿಸುತ್ತಿರುವ ಏಜೆನ್ಸಿ:

ಎಸ್.ಡಿ.ಪಿ ಯೋಜನೆಯ ನಾಮಫಲಕವನ್ನು ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ಅಳವಡಿಸುವುದು ಮತ್ತು ಕಾಮಗಾರಿ ಪೂರ್ಣಗೊಂಡ ನಂತರ **ಡಾ.ನಂಜುಂಡಪ್ಪ ವರದಿಯನ್ವಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಕಟ್ಟಿಸಿದ ಕಟ್ಟಡ** ಎಂದು ನಮೂದಿಸಲು ಈ ಮೂಲಕ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ನಿರ್ದೇಶಕರು (ಪ್ರೌಢಶಿಕ್ಷಣ)

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ,ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇವರ ಮಾಹಿತಿಗಾಗಿ.
2) ವ್ಯವಸ್ಥಾಪಕ ನಿರ್ದೇಶಕರು,ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು ಇವರ ಮಾಹಿತಿಗಾಗಿ.
3) ಸಂಬಂಧಿಸಿದ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರ ಮಾಹಿತಿಗಾಗಿ.
4) ಸಂಬಂಧಿಸಿದ ಉಪನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಲಭ್ಯ ಅಬಿವೃದ್ಧಿ ನಿಯಮಿತ ಇವರಿಗೆ ಸೂಕ್ತ ಕ್ರಮಕ್ಕಾಗಿ.
5) ಸಂಬಂಧಿಸಿದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ.
6) ಸಂಬಂಧಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ.
7) ಕಛೇರಿ ಪ್ರತಿ.